

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಂದರ್ಶನದ ಸ್ವಾರಸ್ಯಗಳು

**ಪ್ರ:** ವೇದಗಳು ಎಷ್ಟು?
ಉ: ಏಳು.

ಪ್ರ: ಯಾವು ಯಾವು?
ಉ: ಋಗ್ವೇದ, ಯಜುರ್ವೇದ, ಸಾಮವೇದ... ಆಯುರ್ವೇದ... ...

ಪ್ರ: ವೇದಗಳನ್ನು ಬರೆದವರು ಯಾರು?
ಉ: ದ.ರಾ. ಬೇಂದ್ರೆ.

ಪ್ರ: ಬೇಂದ್ರೆಯವರ ಕವನ ಸಂಕಲನ 'ನಾಕು ತಂತಿ'ಯಲ್ಲಿ ಬರುವ ನಾಲ್ಕು ತಂತಿಗಳು ಯಾವುವು?
ಉ: ಅದೇ ಸಾರ್ - ಒಂದು, ಎರಡು, ಮೂರು, ನಾಲ್ಕು!

ಪ್ರ: ನಾಲ್ಕನೇ ಮೈಸೂರು ಯುದ್ಧ ನಡೆದದ್ದು ಯಾರ ಮಧ್ಯೆ?
ಉ: ಟಿಪ್ಪೂಸುಲ್ತಾನ್ ಮತ್ತು ಹೈದರಾಲಿ ಮಧ್ಯೆ.

ಪ್ರ: ಏನು!?
ಉ: ಸಾರಿ ಸಾರ್! ಟಿಪ್ಪೂಸುಲ್ತಾನ್ ಮತ್ತು ದೆಹಲಿ ಸುಲ್ತಾನ್ ಮಧ್ಯೆ.

ಪ್ರ: ಷೇಕ್ಸ್‌ಪಿಯರ್‌ನ ಎರಡು ನಾಟಕಗಳ ಹೆಸರು ಹೇಳಿ.
ಉ: ಶಾಕುಂತಲಾ...

ಪ್ರ: ಯಾವ ಲೇಖಕರು ನಿಮಗೆ ಇಷ್ಟ?
ಉ: ಪೂರ್ಣಚಂದ್ರ ತೇಜಸ್ವಿ.

ಪ್ರ: ಅವರ ಯಾವ ಕಾದಂಬರಿಯನ್ನು ನೀವು ಓದಿದ್ದೀರಿ?
ಉ: ಮಲೆಯಲ್ಲಿ ಸುಬ್ಬಮ್ಮ ಹೆಗ್ಗಡಿತಿ.

ಪ್ರ: ಶಿವರಾಮ ಕಾರಂತರ ಪ್ರಸಿದ್ಧ ಕಾದಂಬರಿ ಯಾವುದು?
ಉ: ಶ್ರೀರಾಮಾಯಣ ದರ್ಶನಂ.

ಇವು ನಮ್ಮ ವಿದ್ಯಾಸಂಸ್ಥೆಯ ಶಿಕ್ಷಕರ ಹುದ್ದೆಗೆ ಮೊನ್ನೆ ನಡೆದ ಮೌಖಿಕಪರೀಕ್ಷೆಯಲ್ಲಿ ಸಂದರ್ಶಕರು ಕೇಳಿದ ಪ್ರಶ್ನೆಗಳಿಗೆ ಪದವೀಧರ ಅಭ್ಯರ್ಥಿಗಳಿಂದ ಬಂದ ಉತ್ತರಗಳ ಸ್ಯಾಂಪಲ್. ಇದನ್ನು ಸಂದರ್ಶಕರೊಬ್ಬರು ನಮ್ಮ ಗಮನಕ್ಕೆ ತಂದಾಗ ನಮಗೆ ನೆನಪಾಗಿದ್ದು ಕ್ರಿ.ಪೂ. 2 ನೆಯ ಶತಮಾನದಲ್ಲಿ ಶೂದ್ರಕ ಕವಿ ಬರೆದ ಸುಪ್ರಸಿದ್ಧ ಸಂಸ್ಕೃತ ನಾಟಕ 'ಮೃಚ್ಛಕಟಿಕ'. ಗಿರೀಶ್ ಕಾರ್ನಾಡರು ನಿರ್ದೇಶಿಸಿದ ಹಿಂದೀ ಚಲನಚಿತ್ರ 'ಉತ್ಸವ್' ಈ ನಾಟಕವನ್ನು ಆಧರಿಸಿದ್ದು. ಇಡೀ ನಾಟಕದ ಮೂರು ಪ್ರಮುಖ ಪಾತ್ರಗಳೆಂದರೆ ಅವಂತೀಪುರದ ಶ್ರೀಮಂತ ವರ್ತಕನಾದ 'ಚಾರುದತ್ತ', ಅವನ ರೂಪ ಮತ್ತು ಸದ್ಗುಣಗಳಿಗೆ ಮಾರುಹೋಗಿ ಅವನಲ್ಲಿ ಅನುರಕ್ತಳಾದ ನಗರದ ಮಹಾಚೆಲುವೆ 'ವಸಂತಸೇನೆ' ಮತ್ತು ಅವಳನ್ನು ಹೇಗಾದರೂ ಮಾಡಿ ತನ್ನ ಬುಟ್ಟಿಗೆ ಹಾಕಿಕೊಳ್ಳಬೇಕೆಂದು ವಿಫಲಯತ್ನ ನಡೆಸಿದ 'ಶಕಾರ'. ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳ ಚಿತ್ರಣವಿರುವ ಈ ಅಪರೂಪದ ನಾಟಕದಲ್ಲಿ ಬರುವ ಖಳನಾಯಕನಾದ ಈ 'ಶಕಾರ' ರಾಜನ ಹತ್ತಿರದ ಸಂಬಂಧಿ (ರಾಣಿಯ ತಮ್ಮ). ಯಾವ ಅಧಿಕಾರಸ್ಥಾನದಲ್ಲಿ ಇಲ್ಲದಿದ್ದರೂ ರಾಜನ ಭಾವಮೈದುನನೆಂಬ ಅಹಮ್ಮು ಅವನಿಗೆ. ಅಧಿಕಾರಿಗಳೆಲ್ಲರೂ ತಾನು ಹೇಳಿದಂತೆ ಕೇಳಬೇಕೆಂಬ ದರ್ಪದಿಂದ ಮೆರೆಯುತ್ತಾ ಜನರನ್ನು ಗೋಳುಹೊಯ್ದುಕೊಳ್ಳುತ್ತಿರುತ್ತಾನೆ. ಮಾತೆತ್ತಿದರೆ 'ನಾನು ಯಾರು ಗೊತ್ತೇ? ನಿಮ್ಮ ತಲೆಯನ್ನು ಕತ್ತರಿಸಿಬಿಡುತ್ತೇನೆ' ಎಂದು ಕತ್ತಿ ಝಳಪಿಸಿ ಹೆದರಿಸುತ್ತಾನೆ. ಯಾವ ಅಧಿಕಾರಿಯಾದರೂ ಅವನು ಹೇಳಿದ ಮಾತನ್ನು ಕೇಳದಿದ್ದರೆ ತನ್ನ ಅಕ್ಕ ಮತ್ತು ಭಾವನಿಗೆ ಹೇಳಿ ವರ್ಗಮಾಡಿಸುತ್ತೇನೆಂದು ಹೆದರಿಸುತ್ತಾನೆ **(ರಾಜಾನಂ ಪಾಲಕಂ ಭಗಿನೀಪತಿಂ ವಿಜ್ಞಾಪ್ಯ...ಏತಂ ಅಧಿಕರಣಿಕಂ ದೂರೀಕೃತ್ಯ ಅನ್ಯಮಧಿಕರಣಿಕಂ ಸ್ಥಾಪಯಿಷ್ಯಾಮಿ)**. ತುಂಬಾ ಪೆದ್ದನಾದ ಇವನು ಇತರರೊಂದಿಗೆ ಮಾತನಾಡುವಾಗ ಅನೇಕ ಅಸಂಬದ್ಧ ಮಾತುಗಳನ್ನು ಆಡುತ್ತಾನೆ. ಈ ಶಕಾರನು ಪುರಾಣ ಇತಿಹಾಸಗಳನ್ನು ಕಲಸು ಮೇಲೋಗರ ಮಾಡಿ ಮಾತನಾಡುವಾಗ ಮಾಡುವ ಅಪಲಾಪಗಳನ್ನು ಮತ್ತು ಅವನು ರಾಜನ ಭಾವಮೈದುನನೆಂಬ ಕಾರಣದಿಂದ ಎಲ್ಲರೂ ಸಹಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕವಿ ಶೂದ್ರಕನು ಚೆನ್ನಾಗಿ ಚಿತ್ರಿಸಿದ್ದಾನೆ. ಶಕಾರನ ಪುರಾಣ ಮತ್ತು ಇತಿಹಾಸಗಳ ಪರಿಜ್ಞಾನ ಹೇಗಿತ್ತೆಂಬುದಕ್ಕೆ ತಾನು ಮೋಹಿಸಿದ ವಸಂತಸೇನೆಯನ್ನು ಕುರಿತು ನಾಟಕದಲ್ಲಿ ಅವನಾಡುವ ಈ ಮುಂದಿನ ಮಾತುಗಳನ್ನು ಗಮನಿಸಿ:

1. **ಝಣಜ್ಝಣಮಿತಿ ಬಹುಭೂಷಣಶಬ್ದಮಿಶ್ರಂ**
   **ಕಿಂ ದ್ರೌಪದೀವ ಪಲಾಯಸೇ ರಾಮಭೀತಾ ।" (1.25)**

(ರಾಮನಿಗೆ ಹೆದರಿ ಓಡಿದ ದ್ರೌಪದಿಯಂತೆ ಮೈಮೇಲಿನ ಆಭರಣಗಳಿಂದ ಝಣ ಝಣ ಎಂದು ಶಬ್ದ ಮಾಡುತ್ತಾ ಏಕೆ ಓಡುತ್ತಿದ್ದೀಯಾ?

**2. ಮಮ ವಶಮನುಯಾತಾ ರಾವಣಸ್ಯೇವ ಕುಂತೀ । (1.21)**

(ರಾವಣನ ವಶಕ್ಕೆ ಒಳಗಾದ ಕುಂತಿಯಂತೆ ನೀನು ನನ್ನ ವಶಕ್ಕೆ ಬಂದಿರುವೆ)

**3. ಕಿಂ ಭೀಮಸೇನೋ ಜಮದಗ್ನಿಪುತ್ರಃ
ಕುಂತೀಸುತೋ ವಾ ದಶಕಂಧರೋ ವಾ ।
ಏಷೋಽಹಂ ಗೃಹೀತ್ವಾ ಕೇಶಹಸ್ತೇ
ದುಃಶಾಸನಸ್ಯಾನುಕೃತಿಂ ಕರೋಮಿ ॥ (1.29)**

(ಜಮದಗ್ನಿಯ ಮಗ ಭೀಮ ಬೇಕಾದರೂ ಬರಲಿ, ಕುಂತಿಯ ಮಗ ರಾವಣನಾದರೂ ಬರಲಿ, ದುಃಶಾಸನನು ಸೀತೆಯನ್ನು ಎಳೆದುಕೊಂಡು ಹೋದ ಹಾಗೆ ನಿನ್ನ ತಲೆಗೂದಲನ್ನು ನಾನು ಹಿಡಿದು ಎಳೆದುಕೊಂಡು ಹೋಗುತ್ತೇನೆ.

**4. ಶೃಣೋಮಿ ಮಾಲ್ಯಗಂಧಂ, ಅಂಧಕಾರ-ಪೂರಿತಯಾ ಪುನರ್ನಾಸಿಕಯಾ ನ ಸುವ್ಯಕ್ತಂ ಪಶ್ಯಾಮಿ ಭೂಷಣಶಬ್ದಂ ।**

(ಹೂವಿನ ಸುವಾಸನೆಯೇನೋ ಕಿವಿಗೆ ಕೇಳಿಸ್ತಾ ಇದೆ, ಆದರೆ ಕಗ್ಗತ್ತಲಲ್ಲಿ ಆಭರಣಗಳ ಶಬ್ದ ಮಾತ್ರ ಮೂಗಿಗೆ ಕಾಣಿಸ್ತಾ ಇಲ್ಲ)

**5. ಯದಿ ರಾಕ್ಷಸೀ ಪ್ರತಿವಸತಿ ತತ್ಕಥಂ ನ ತ್ವಾಂ ಮುಷ್ಣಾತಿ? ಅಥ ಚೌರಃ, ತದಾ ಕಿಂ ತ್ವಂ ನ ಭಕ್ಷಿತಃ?**

(ರಥದಲ್ಲಿ ಅವಿತುಕೊಂಡಿರುವುದು ರಾಕ್ಷಸಿಯಾಗಿದ್ದರೆ ನಿನ್ನನ್ನು ಏಕೆ ಕದಿಯಲಿಲ್ಲ, ಕಳ್ಳನಾಗಿದ್ದರೆ ನಿನ್ನನ್ನು ಏಕೆ ತಿನ್ನಲಿಲ್ಲ?)

ಆರಂಭದಲ್ಲಿ ಉಲ್ಲೇಖಿಸಿದಂತೆ ಸಂದರ್ಶನದಲ್ಲಿ ಕೆಲವಾರು ಅಭ್ಯರ್ಥಿಗಳು ನೀಡಿದ ಉತ್ತರಗಳಿಗೂ ಎರಡು ಸಾವಿರ ವರ್ಷಗಳ ಹಿಂದೆ ರಚಿತವಾದ ಮೃಚ್ಛಕಟಿಕ ನಾಟಕದ ಶಕಾರನ ಮಾತುಗಳಿಗೂ ತುಂಬಾ ಹೋಲಿಕೆ ಇದೆ. ಆ ಶಕಾರನ ಪಾತ್ರವನ್ನು ಇಂದಿನ ಅನೇಕ ಪದವೀಧರರು ಹೋಲುತ್ತಾರೆ. ಇವರಿಗೆ ಓದಿದ ವಿಷಯದಲ್ಲಿ ಇರಬೇಕಾದ ವಿದ್ವತ್ತಾಗಲೀ, ಪರಿಜ್ಞಾನವಾಗಲೀ ಇಲ್ಲ, ಇವರು ಪಡೆದ 'ಜ್ಞಾನ'ವು ವ್ಯವಹಾರದಲ್ಲಿ ಬಳಕೆಯಾಗುತ್ತಿಲ್ಲ; ಸಮಾಜಕ್ಕೆ ಪ್ರಯೋಜನವೂ ಆಗುತ್ತಿಲ್ಲ. 'ಮೃಚ್ಛಕಟಿಕ' ಎಂದರೆ ಮಣ್ಣಿನ ಬಂಡಿ. ಅದು ನಿಜವಾದ ಬಂಡಿಯಲ್ಲ, ಮಕ್ಕಳ ಆಟಿಕೆ ಮಾತ್ರ; ಹಾಗೆಯೇ ಇಂದಿನ ಪದವೀಧರರು ವಿಶ್ವವಿದ್ಯಾನಿಲಯಗಳಿಂದ ಪಡೆಯುವ ಪದವಿಗಳು ಮಕ್ಕಳ ಆಟಿಕೆಯ ಬಂಡಿಯಾಗಿವೆಯೇ ಹೊರತು, ಪ್ರಯೋಜನಕ್ಕೆ ಬರುವ ಸಾಧನವಾಗಿಲ್ಲ. ಇದಕ್ಕೆ ಮೌಲ್ಯಮಾಪನ ಸಂದರ್ಭದಲ್ಲಿ ಹೆಚ್ಚಿನ ಭತ್ಯೆಗಾಗಿ ಮುಷ್ಕರ ಹೂಡುವ 'ವಿತ್ತಾಪಹಾರಕ' ಶಿಕ್ಷಕರು ಕಾರಣರೇ ಅಥವಾ ಒಟ್ಟಾರೆ ನಮ್ಮ ಪರೀಕ್ಷಾಪದ್ಧತಿಯೇ ಸರಿಯಿಲ್ಲವೇ ಶಿಕ್ಷಣತಜ್ಞರು ಆಲೋಚಿಸುವುದು ಒಳಿತು. ಇನ್ನು ಮುಂದಾದರೂ ನಮ್ಮ ವಿಶ್ವವಿದ್ಯಾನಿಲಯಗಳು ಈ ಶಕಾರನ ಸಂತತಿ ಬೆಳೆಯದಂತೆ ಎಚ್ಚರ ವಹಿಸುವುದು ಇಂದಿನ ತುರ್ತು ಅಗತ್ಯ.

70 ರ ದಶಕದಲ್ಲಿ ಬೆನಾರಸ್ ಹಿಂದೂ ಯೂನಿವರ್ಸಿಟಿಯಲ್ಲಿ ನಾವು ಓದುತ್ತಿದ್ದಾಗ ಅಲ್ಲಿಯ 'ಆಜ್' ಎಂಬ ಹಿಂದೀ ದಿನಪತ್ರಿಕೆಯಲ್ಲಿ ವರದಿಯಾಗಿದ್ದ ಒಂದು ರೋಚಕ ಘಟನೆ ನಮ್ಮ ಸ್ಮರಣೆಯಲ್ಲಿ ಇನ್ನೂ ಹಚ್ಚಹಸಿರಾಗಿದೆ. ಸೋಮಾರಿ ವಿದ್ಯಾರ್ಥಿಯೊಬ್ಬ ಪರೀಕ್ಷೆಗೆ ಹೋದ. ಏನೂ ಓದಿರಲಿಲ್ಲವಾದ ಕಾರಣ ಪರೀಕ್ಷೆಯಲ್ಲಿ ಕೇಳಿದ ಒಂದು ಪ್ರಶ್ನೆಗೂ ಉತ್ತರ ಬರೆಯಲು ಅವನಿಂದ ಆಗಲಿಲ್ಲ. ಆದರೂ ಉತ್ತರ ಪತ್ರಿಕೆಯ ಖಾಲಿ ಹಾಳೆಗಳನ್ನು ಹಾಗೆಯೇ ಹಿಂತಿರುಗಿಸದೆ ತನ್ನ ಕಷ್ಟಕಾರ್ಪಣ್ಯಗಳನ್ನು ವಿವರವಾಗಿ ಬರೆದ. ಹೇಗಾದರೂ ಮಾಡಿ ತನ್ನನ್ನು ಪಾಸು ಮಾಡಿ ಪುಣ್ಯ ಕಟ್ಟಿಕೊಳ್ಳಬೇಕೆಂದು ಮೌಲ್ಯಮಾಪಕರಲ್ಲಿ ನಿವೇದಿಸಿಕೊಂಡ. ಕೊನೆಯಲ್ಲಿ ಒಂದು ಪದ್ಯವನ್ನೂ ಹೀಗೆ ಬರೆದ: "ಗಾಯ್ ಹಮಾರೀ ಮಾತಾ ಹೈಂ, ಹಮ್‌ಕೋ ಕುಛ್ ನಹೀಂ ಆತಾ ಹೈಂ!" ಇದನ್ನು ಓದಿದ ಮೌಲ್ಯಮಾಪಕರು ನಸುನಕ್ಕು ಆ ಹುಡುಗನ ಕವಿತೆಯ ಕೆಳಗೆ ಅವರೊಂದು ಕವಿತೆಯನ್ನು ಹೀಗೆ ಬರೆದರು: "ಬೈಲ್ ಹಮಾರಾ ಬಾಪ್ ಹೈಂ, ನಂಬರ್ ದೇನಾ ಪಾಪ್ ಹೈಂ!"



ಸಹೃದಯ ಓದುಗರೇ! ನೀವೂ ಇದನ್ನು ಓದಿ ನಸುನಕ್ಕು ಸುಮ್ಮನಾಗಬಹುದು. ಆದರೆ ಆ ಹುಡುಗನಿಗೆ ಶಾಲೆಯಲ್ಲಿ ಕಲಿಸುವ ಪಠ್ಯವಿಷಯಗಳ ಬಗ್ಗೆ ನಿರಾಸಕ್ತಿ ಇದ್ದರೂ ಅವನಲ್ಲಿ ಪ್ರತಿಭೆ ಇಲ್ಲವೆಂದು ಹೇಗೆ ಹೇಳುತ್ತೀರಿ? ಸುಪ್ತವಾಗಿರುವ ಅಂತಹ ಬಾಲಪ್ರತಿಭೆಗಳ ವಿಕಾಸ ಇಂದಿನ ಶಿಕ್ಷಣ ಪದ್ಧತಿಯಿಂದ ಸಾಧ್ಯವೇ?

22.3.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ